2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು.

**ಎಸ್.ಸಿ.ನಂ. *63/2016***

ಆರೋಪಿಯ ಹೆಸರು : ಮೊಹಮದ್ ಲತೀಫ್ @ ಅಬ್ದುಲ್ ಲತೀಫ್
**A-4**

ತಂದೆಯ ಹೆಸರು : ಅಬ್ದುಲ್ ರಜಾಕ್

ವಯಸ್ಸು : 32 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ಮಸೀದಿಕೆರೆ, ಬಾಳೆಹೊನ್ನೂರು
ಎನ್ ಆರ್ ಪುರ ತಾಲ್ಲೂಕು.

ಕಲಂ 313 ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಶ್ನೆ 1: ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರ: ಕೇಳಿದ್ದೇನೆ

ಪ್ರಶ್ನೆ 2 ಪ್ರಾ.ಸಾ.1 ಶ್ರೀ ಅನಿಲ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಬಾಡಿಗೆಗೆ ಆಟೋದಲ್ಲಿ ಅಕ್ಷರನಗರಕ್ಕೆ ಹೋಗಿ ಪ್ರಯಾಣಿಕರನ್ನು ಬಿಟ್ಟು ಒಕ್ಕಲಿಗರ ಸಮೂದಾಯ ಭವನದ ಎದುರು ಬರುತ್ತಿರುವಾಗ, ಕಾರನ್ನು 1 ರಿಂದ 6 ನೇ ಆರೋಪಿತರಾದ ನೀವು ನೀಲ್ಲಿಸಿಕೊಂಡು ರಸ್ತೆಯಲ್ಲಿ ನಿಂತಿದ್ದಿರಿ, ತನ್ನನ್ನು ಅಡ್ಡ ಹಾಕಿ, ದಿನಾಂಕ 09.06.2015 ರಂದು ಆರೋಪಿತರಾದ ನೀವುಗಳು ದನಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಪೋಲಿಸರಿಗೆ ತಿಳಿಸಿದ್ದಕ್ಕೆ, ಎನೋ ಸೂಳೆಮಗನೆ ಪೋಲಿಸರಿಗೆ ಹಿಡಿದುಕೊಟ್ಟಿದ್ದಿಯಾ ಎಂದು ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ 3 ಪ್ರಾ.ಸಾ.1 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ 3 ನೇ ಆರೋಪಿತನಾದ ನೀನು ರಾಡಿನಿಂದ ತಲೆಗೆ ಮೈಕೈಗೆ ಹೊಡೆದರು ತನ್ನ ಮೂಗಿಗೆ, ಕೈಗೆ ಬೆನ್ನಿಗೆ,

ಕಾಲಿಗೆ ಪೆಟ್ಟಾಯಿತು ಆರೋಪಿತರೆಲ್ಲರೂ ಕೊಲೆ ಮಾಡಬೇಕೆಂದು ಉದ್ದೇಶಪೂರ್ವಕವಾಗಿ ತನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 4 ಫ್ರಾಸಾ.1 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆಗ ಸಂದೀಪ ಮತ್ತು ಪ್ರಮೋದ್ ಬಂದು ಜಗಳ ಬಿಡಿಸಿ ಆಸ್ಪತ್ರೆಗೆ ಸೇರಿಸಿದರು ತಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಂತರ ಹೆಚ್ಚಿನ ಚಿಕಿತ್ಸೆಯನ್ನು ಮಂಗಳೂರು ಸಿಟಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ, ತಾನು ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ತನ್ನ ಹೇಳಿಕೆಯನ್ನು ನಿಪಿ.1 ರಂತೆ ಪಡೆದಿರುತ್ತಾರೆ ಹಾಗೂ ಪೋಲಿಸರು ಮಂಗಳೂರು ಆಸ್ಪತ್ರೆಯಲ್ಲಿ ತಾನು ಚಿಕಿತ್ಸೆ ಪಡೆಯುತ್ತಿದ್ದಾಗ ಬಂದು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5 ಫ್ರಾಸಾ.1 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾನು ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಪೋಲಿಸ್ ಠಾಣೆಗೆ ಹೋಗಿ ತನ್ನ ರಕ್ತ ಹತ್ತಿದ ಪ್ಯಾಂಟ್ ಮತ್ತು ಶರ್ಟನ್ನು ಹಾಜರುಪಡಿಸಿರುತ್ತೇನೆ, ಪಂಚರ ಸಮಕ್ಷಮ ಸದರಿ ಬಟ್ಟೆಗಳನ್ನು ನಿಪಿ.2 ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡಿರುತ್ತಾರೆ, ಅವುಗಳನ್ನು ಒಂದು ಬ್ಯಾಗಿನಲ್ಲಿ(mo.1) ಹಾಕಿ ತನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ, 1 ರಿಂದ 6 ನೇ ಆರೋಪಿತರು ಹೊಡೆದ ನಂತರ 7 ನೇ ಆರೋಪಿಯ ಹತ್ತಿರ ಹೋಗಿ ಆತ ಹೇಳಿದಂತೆ ಉಳಿದ ಆರೋಪಿಗಳು ತನಗೆ ಹೊಡೆದರು, ತದನಂತರ 7 ನೇ ಆರೋಪಿಯ ಕಾರಿನಲ್ಲಿ ಉಳಿದ ಆರೋಪಿಗಳು ಶಿವಮೊಗ್ಗಕ್ಕೆ ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 6 ಫ್ರಾಸಾ.2 ಎಸ್ ಮಂಜುನಾಥ, ಚಾಲಕ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 15.06.2015 ರಂದು ಸಂಜೆ 6 ಗಂಟೆ ಸಮಯದಲ್ಲಿ ಪೋಲಿಸರು ರೇಣುಕಾನಗರದ ಗಣಪತಿ ದೇವಸ್ಥಾನದ ರಸ್ತೆಯಲ್ಲಿ ಪೋಲಿಸರ ಜೊತೆ ಸಂದೀಪ್ ಇದ್ದಾಗ ಸಂದೀಪ್ ಸ್ಥಳವನ್ನು ತೋರಿಸಿದರು, ಆ ಸ್ಥಳದಲ್ಲಿ 3 ದೊಣ್ಣೆ 2 ರಾಡ್ ಗಳನ್ನು ನಿಪಿ.3 ಮಹಜರ್ ಮೂಲಕ ಜಪ್ತು ಮಾಡಿಕೊಂಡರು ಹಾಗೂ ಆ ಸಮಯದಲ್ಲಿ ನಿಪಿ.4 ರಂತೆ ತನ್ನ ಪೋಟೋವನ್ನು ತೆಗೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 7 ಫ್ರಾಸಾ.3 ಶ್ರೀ ಕೆ ಮಂಜುನಾಥ, ಗಾರೆ ಕೆಲಸ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ

15.06.2015 ರಂದು ಸಂಜೆ 6 ಗಂಟೆ ಸಮಯದಲ್ಲಿ ಪೋಲಿಸರು ರೇಣುಕಾನಗರದ ಗಣಪತಿ ದೇವಸ್ಥಾನದ ರಸ್ತೆಯಲ್ಲಿ ಪೋಲಿಸರ ಜೊತೆ ಸಂದೀಪ್ ಇದ್ದಾಗ, ಸಂದೀಪ್ ಸ್ಥಳವನ್ನು ತೋರಿಸಿದರು, ಆ ಸ್ಥಳದಲ್ಲಿ 3 ದೊಣ್ಣೆ 2 ರಾಡ್ ಗಳನ್ನು ನಿಪಿ.3 ಮಹಜರ್ ಮೂಲಕ ಜಪ್ತು ಮಾಡಿಕೊಂಡರು ಹಾಗೂ ಆ ಸಮಯದಲ್ಲಿ ನಿಪಿ.4 ರಂತೆ ತನ್ನ ಪೋಟೋವನ್ನು ತೆಗೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 8 ಪ್ರಾಸಾ.4 ಶ್ರೀ ಪುಟ್ಟನಂಜ ಎಲಿಗಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಒಂದುವರೆ ವರ್ಷದ ಹಿಂದೆ 4 ಗಂಟೆ ಸಮಯದಲ್ಲಿ ಗಲಾಟೆಯಾದ ಒಂದು ವಾರಕ್ಕೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರಬೇಕಾದರೆ ಪೋಲಿಸರು ತನ್ನನ್ನು ಕರೆದರು, ಆ ಸಮಯದಲ್ಲಿ ಅನಿಲ್ ರವರು ರಕ್ತ ಹತ್ತಿದ ಶರ್ಟ್ ಮತ್ತು ಪ್ಯಾಂಟನ್ನು ಹಾಜರುಪಡಿಸಿದರು, ಆಗ ಅವುಗಳನ್ನು ಜಪ್ತುಪಡಿಸಿಕೊಂಡು ನಿಪಿ.2 ರಂತೆ ಮಹಜರ್ ಮಾಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 9 ಪ್ರಾಸಾ.5 ಶಶಾಂಕ್ ಇವರು ತಮ್ಮ ಸಾಕ್ಷ್ಯದಲ್ಲಿ ಒಂದುವರೆ ವರ್ಷದ ಹಿಂದೆ 4 ಗಂಟೆ ಸಮಯದಲ್ಲಿ ಗಲಾಟೆಯಾದ ಒಂದು ವಾರಕ್ಕೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರಬೇಕಾದರೆ, ಪೋಲಿಸರು ತನ್ನನ್ನು ಕರೆದರು, ಆ ಸಮಯದಲ್ಲಿ ಅನಿಲ್ ರವರು ರಕ್ತ ಹತ್ತಿದ ಶರ್ಟ್ ಮತ್ತು ಪ್ಯಾಂಟನ್ನು ಹಾಜರುಪಡಿಸಿದರು, ಆಗ ಅವುಗಳನ್ನು ಜಪ್ತುಪಡಿಸಿಕೊಂಡು, ನಿಪಿ.2 ರಂತೆ ಮಹಜರ್ ಮಾಡಿದರು ಮತ್ತು ಅವುಗಳನ್ನು ಪ್ರತ್ಯೇಕವಾಗಿ ಒಂದು ಬ್ಯಾಗಿನಲ್ಲಿ ಹಾಕಿ, ತಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 10ಃ ಪ್ರಾಸಾ.10 ಸಂದೀಪ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ಬಾಳೆಹೊನ್ನೂರಿಗೆ ಹೋಗಿ ವಾಪಾಸ್ಸು ಬೈಕಿನಲ್ಲಿ ಮನೆಗೆ ಬರುತ್ತಿದ್ದಾಗ ಸಂಜೆ 7.30 ರ ಸಮಯದಲ್ಲಿ ಒಕ್ಕಲಿಗಳ ಸಮಾದಾಯ ಭವನದ ಹತ್ತಿರ ಬಂದಾಗ 1 ರಿನದ 6 ನೇ ಆರೋಪಿತರು ಕತ್ತಿ ದೊಣ್ಣೆ ಮತ್ತು ರಾಡಿನಿಂದ ಪಿರ್ಯಾದಿಗೆ ಹೊಡೆಯುತ್ತಿದ್ದರು, ಜುಬೇರ್‌ರವರು ಕತ್ತಿಯಿಂದ ಪಿರ್ಯಾದಿಯ ತಲೆಗೆ ಮತ್ತು ಬೆನ್ನಿಗೆ ಹೊಡೆದರು, ಉಳಿದವರು ದೊಣ್ಣೆಗಳಿಂದ ಮೈಕೈಗೆ ಹೊಡೆದರು, ಆ ಸಮಯಕ್ಕೆ ಪ್ರಮೋದ್ ಎನ್ನುವವರು ಅಲ್ಲಿಗೆ ಬಂದರು, ತಾವು

ಅಲ್ಲಿಗೆ ಹೋಗಿ ಜಗಳವನ್ನು ಬಿಡಿಸಿದೆವು, ಘಟನೆ ನಡೆದ ನಂತರ ಎಲ್ಲರೂ ಎಸ್ಟೀಮ್ ಕಾರಿನಲ್ಲಿ ಹೊರಟು ಹೋದರು, ಪಿರ್ಯಾದಿ ಗಾಯಗೊಂಡಿದ್ದರಿಂದ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 11 ಪ್ರಾಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಲ್ಲಿ ವಿಚಾರಿಸಿದಾಗ ಆರೋಪಿಗಳು ದನಗಳನ್ನು ಸಾಗಾಟ ಮಾಡುತ್ತಿದ್ದಾಗ ಪಿರ್ಯಾದಿ ಪೋಲಿಸರಿಗೆ ಮಾಹಿತಿ ಕೊಟ್ಟು ಹಿಡಿಸಿ ಹಾಕಿದ್ದರು, ಆ ಕಾರಣ ಆರೋಪಿಗಳು ಪಿರ್ಯಾದಿಗೆ ಹಲ್ಲೆ ಮಾಡಿರುತ್ತಾರೆ, ಪಿರ್ಯಾದಿಯ ಹತ್ತಿರ ಇದ್ದ ಮೊಬೈಲ್, ಹಣ, ಮತ್ತು ಚೈನ್ ಇಲ್ಲ, ಘಟನಾ ಸ್ಥಳಕ್ಕೆ ಹೋಗಿ ನೋಡಿ ಅಂತ ಹೇಳಿದರು, ತಾವು ಹೋಗಿ ನೋಡಿದಾಗ ಸ್ಥಳದಲ್ಲಿ 3 ಸಾವಿರ ಹಣ, ಚೈನ್ ಮತ್ತು ಮೊಬೈಲ್ ಸಿಕ್ಕಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 12 ಪ್ರಾಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 15.06.2015 ರಂದು ಘಟನಾ ಸ್ಥಳಕ್ಕೆ ಪೋಲಿಸರು ಸ್ಥಳಕ್ಕೆ ಬಂದಾಗ ತಾನೇ ಗಲಾಟೆ ನಡೆದ ಜಾಗವನ್ನು ತೋರಿಸಿದ್ದು, ಪೋಲಿಸರು ಸ್ಥಳದಲ್ಲಿ ಬಿದ್ದಿದ್ದ ದೊಣ್ಣೆ ಕಬ್ಬಿಣದ ರಾಡನ್ನು ತೆಗೆದುಕೊಂಡರು, ಮಹಜರ್ ಕಾಲದಲ್ಲಿ ಇಬ್ಬರು ಮಂಜುನಾಥ ಇದ್ದರು, ಅವರು ಮಹಜರಿಗೆ ಸಹಿ ಮಾಡಿರುತ್ತಾರೆ, ಆ ದಿನ ಪಿರ್ಯಾದಿಗೆ ನ್ಯಾಯಾಲಯದ ಮುಂದಿರುವ 1 ರಿಂದ 6ನೇ ಆರೋಪಿತರೇ ಹಲ್ಲೆ ಮಾಡಿರುತ್ತಾರೆ ಮತ್ತು ನಿಪಿ.4 ಪೋಟೋವನ್ನು ಕೃತ್ಯ ನಡೆದ ಸ್ಥಳದಲ್ಲಿ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 13 ಪ್ರಾಸಾ.11 ಪ್ರಮೋದ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ತಾನು ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿರುವಾಗ ಸಮದಾಯ ಭವನದ ಹತ್ತಿರ 1 ರಿಂದ 6ನೇ ಆರೋಪಿತರು ಕತ್ತಿ, ದೊಣ್ಣೆ ಮತ್ತು ರಾಡಿನಿಂದ ಪಿರ್ಯಾದಿಗೆ ಹೊಡೆಯುತ್ತಿದ್ದರು, ಜುಬೇರ್ರವರು ಕತ್ತಿಯಿಂದ ಪಿರ್ಯಾದಿಯ ತಲೆಗೆ ಮತ್ತು ಕೈಗೆ ಹೊಡೆದರು, ಸಲಿಂ ಮತ್ತು ಅಸಿಫ್ ರವರು ರಾಡಿನಿಂದ ಪಿರ್ಯಾದಿಯ ತಲೆಗೆ ಮತ್ತು ಬೆನ್ನಿಗೆ ಹೊಡೆದರು, ಉಳಿದವರು ದೊಣ್ಣೆಗಳಿಂದ ಮೈಕೈಗೆ ಹೊಡೆದರು, ಆ ಸಮಯಕ್ಕೆ ಪ್ರಮೋದ್ ಎನ್ನುವವರು ಅಲ್ಲಿಗೆ

ಬಂದರು, ತಾವು ಅಲ್ಲಿಗೆ ಹೋಗಿ ಜಗಳವನ್ನು ಬಿಡಿಸಿದೆವು, ಘಟನೆ ನಡೆದ ನಂತರ ಎಲ್ಲರೂ ಕಾರಿನಲ್ಲಿ ಹೊರಟು ಹೋದರು, ಪಿರ್ಯಾದಿ ಗಾಯಗೊಂಡಿದ್ದರಿಂದ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 14 ಪ್ರಾ.ಸಾ.11 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಲ್ಲಿ ವಿಚಾರಿಸಿದಾಗ ಆರೋಪಿಗಳು ದನಗಳನ್ನು ಸಾಗಾಟ ಮಾಡುತ್ತಿದ್ದಾಗ ಪಿರ್ಯಾದಿ ಪೋಲಿಸರಿಗೆ ಮಾಹಿತಿ ಕೊಟ್ಟು ಹಿಡಿಸಿ ಹಾಕಿದ್ದರು, ಆ ಕಾರಣ ಆರೋಪಿಗಳು ಪಿರ್ಯಾದಿಗೆ ಹಲ್ಲೆ ಮಾಡಿರುತ್ತಾರೆ, ಪಿರ್ಯಾದಿಯ ಹತ್ತಿರ ಇದ್ದ ಮೊಬೈಲ್, ಹಣ ಮತ್ತು ಚೈನ್ ಇಲ್ಲ, ಘಟನಾ ಸ್ಥಳಕ್ಕೆ ಹೋಗಿ ನೋಡಿ ಅಂತ ಹೇಳಿದರು, ತಾವು ಹೋಗಿ ನೋಡಿದಾಗ ಸ್ಥಳದಲ್ಲಿ 3 ಸಾವಿರ ಹಣ, ಚೈನ್ ಮತ್ತು ಮೊಬೈಲ್ ಸಿಕ್ಕಿತು, ಆಸ್ಪತ್ರೆಗೆ ಅವುಗಳನ್ನು ಕೊಡಲು ಹೋದಾಗ ಪಿರ್ಯಾದಿ ಇರಲಿಲ್ಲ, ಆತನನ್ನು ಮಂಗಳೂರಿಗೆ ಕರೆದುಕೊಂಡು ಹೋಗಿದ್ದರು, ಅವುಗಳನ್ನು ಅವರ ಮನೆಯವರಿಗೆ ಕೊಟ್ಟಿರುತ್ತೇವೆ ಮತ್ತು ಪಿರ್ಯಾದಿಗೆ ನ್ಯಾಯಾಲಯದ ಮುಂದಿರುವ 1 ರಿಂದ 6ನೇ ಆರೋಪಿತರೇ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 15 ಪ್ರಾ.ಸಾ.12 ಶ್ರೀ ಸಲೀಂ ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ಹತ್ತಿರ ಎಸ್ಟೀಮ್ ಕಾರು ಇದ್ದು ಅದರ ಸಂಖ್ಯೆ ಕೆಎ 03ಃಎನ್ 8881 ಇರುತ್ತದೆ, ದಿನಾಂಕ 13.06.2015 ರಂದು ಜುಬೇರ್ ರವರಿಗೆ ತನ್ನ ಕಾರನ್ನು ಕೊಟ್ಟಿದ್ದೆ, ನಂತರ ಪೋಲಿಸರು ತನ್ನ ಕಾರನ್ನು ಕೇಸಾಗಿದೆ ಹಾಜರುಪಡಿಸಿ ಅಂತ ಹೇಳಿದ ಮೇರೆಗೆ ಹಾಜರುಪಡಿಸಿರುತ್ತೇನೆ, ನಿಪಿ.6 ಮಹಜರ್ ಮೂಲಕ ಕಾರನ್ನು ಜಪ್ತು ಮಾಡಿರುತ್ತಾರೆ, ನಂತರ ಕಾರನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ16 ಪ್ರಾ.ಸಾ.14 ಡಾಃ ಶ್ರೀನಾಥ ವೈದ್ಯಾಧಿಕಾರಿಗಳು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **13.06.2015** ರಂದು ರಾತ್ರಿ **8.25** ಗಂಟೆ ಸಮಯದಲ್ಲಿ ಅನಿಲ್ ಎನ್ನುವವರು ಜುಬೇರ್, ಶರೀಫ್, ತೌಸಿಫ್, ಆಸಿಫ್ ಇತರರು ಚಾಕು ರಾಡುಗಳಿಂದ ಹಲ್ಲೆ ಮಾಡಿದ್ದಾರೆಂದು ಚಿಕಿತ್ಸೆಗೆ ಬಂದಿದ್ದರು, ಅವರನ್ನು ಪರೀಕ್ಷೆ

ಮಾಡಿದಾಗ ತಲೆಯ ಮದ್ಯ ಭಾಗದಲ್ಲಿ ಆರಿದ ಗಾಯ ಇದ್ದು, ತಲೆಯ ಬಲಭಾಗದಲ್ಲಿ ಮೂಗಿನ ಎರಡು ಹೊಳ್ಳೆಗಳಲ್ಲಿ ರಕ್ತ ಸ್ರಾವವಾಗುತ್ತಿತ್ತು, ಎಡ ತೋರು ಬೆರಳು ಮತ್ತು ಹೆಬ್ಬರಳಿನ ಮದ್ಯದಲ್ಲಿ ಆಳವಾದ ಗಾಯ ಇತ್ತು, ಬೆನ್ನಿನ ಬಲಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ ಊತದ ಗಾಯ ಮತ್ತು ಬೆನ್ನಿನ ಕೆಳಭಾಗದಲ್ಲಿ ತರಚಿದ ಗಾಯ ಇತ್ತು, ಈ ಗಾಯಗಳೆಲ್ಲ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ನಿಪಿ.8 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಹಾಗೂ 1 ನೇ ಗಾಯ ರಾಡಿನಿಂದ 2 ಮತ್ತು 3 ಗಾಯ ಕತ್ತಿಯಿಂದ ಉಳಿದ ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ17 ಪ್ರಾಸಾ.16 ಶ್ರೀ ಯು.ಬಿ. ನಂದಕುಮಾರ್ ಅರಕ್ಷಕ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ಎ.ಎಸ್.ಐ ಕಳಸಪ್ಪರವರಿಂದ ಕಡತವನ್ನು ಪಡೆದುಕೊಂಡು, ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟು, ದಾಖಲಾಗಿದ್ದ ಅನಿಲ್ ನನ್ನು ಭೇಟಿಯಾಗಿ ಮುಂದುವರೆದ ಹೇಳಿಕೆಯನ್ನು ಮಾಡಿಕೊಂಡು, ದಿನಾಂಕ 14.06.2015 ರಂದು ಸಂಜೆ 5 ಗಂಟೆ ಸಮಯದಲ್ಲಿ ಬಾಳೆಹೊನ್ನೂರು ಪಿ.ಎಸ್.ಐ ಲೋಹರ್ ಮತ್ತು ಸಿಬ್ಬಂದಿಯವರು ತನ್ನ ಮುಂದೆ ಲತೀಫ್, ತೌಸಿಫ್ ಮತ್ತು ಶರೀಫ್ ರವರನ್ನು ಹಾಜರುಪಡಿಸಿದರು, ಅವರನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಕ್ರಮವನ್ನು ಅನುಸರಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಬಂಧನ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ18 ಪ್ರಾಸಾ.16 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 15.06.2015 ರಂದು ಗುನ್ನ ಸ್ಥಳಕ್ಕೆ ಭೇಟಿ ಕೊಟ್ಟು, ಸಂದೀಪ್ ರವರು ತೋರಿಸಿದ ಸ್ಥಳದಲ್ಲಿ ಮಂಜುನಾಥ ಬಿನ್ ಶಶಿಕುಮಾರ್, ಮಂಜುನಾಥ ಬಿನ್ ಕೃಷ್ಣಪ್ಪ ರವರ ಸಮಕ್ಷಮ ವಹಜರನ್ನು ಮಾಡಿ, ಮಹಜರ್ ಸಮಯದಲ್ಲಿ 2 ಕಬ್ಬಿಣದ ರಾಡುಗಳನ್ನು ಮತ್ತು 3 ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ, ಸಂದಿಪ್ ಮತ್ತು ಪ್ರಮೋದರವರ ಹೇಳಿಕೆಯನ್ನು ಪಡೆದುಕೊಂಡು, ಅಮಾನತುಪಡಿಸಿಕೊಂಡು ವಸ್ತುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡು, ಮುಂದಿನ ತನಿಖೆಯನ್ನು ಕೃಷ್ಣಮೂರ್ತಿಯವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ19 ಪ್ರಾಸಾ.17 ಶ್ರೀ ಕೃಷ್ಣಮೂರ್ತಿ ಅರಕ್ಷಕ ವೃತ್ತ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ- ದಿನಾಂಕ **22.06.2015** ರಂದು ಬಾಳೆಹೊನ್ನೂರು ಠಾಣೆಗೆ ಭೇಟಿ ಕೊಟ್ಟಾಗ ಈ ಕೇಸಿನ ಪಿರ್ಯಾದಿ ಅನಿಲ್ ಹಾಜರಾಗಿ ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿದರು, ಅವುಗಳನ್ನು ನಿಪಿ.**2** ರಡಿಯಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ20ಃ ಪ್ರಾಸಾ.17 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ತಜ್ಞರ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೆನೆ ಹಾಗೂ ಹೆಚ್ ಸಿ 206 ರವರು ವಾಹನ ಎಸ್ಟೀಮ್ ಕಾರ್ ನಂ.ಕೆ ಎ 03ಃಎನ್ಃ8881 ವಾಹನವನ್ನು ತಲಾಸು ಮಾಡಿಕೊಂಡು ಹಾಜರುಪಡಿಸಿದಮೇರೆಗೆ ನಿಪಿ.6 ಮಹಜರ್ ಮುಖಾಂತರ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ ನಂತರ ಪ್ರಕರಣದ ತನಿಖೆಯನ್ನು ಮುಕ್ತಾಯಗೊಳಿಸಿ, ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ21ಃ ಪ್ರಾಸಾ.18 ಲೋಕನಾಥ ಮುಖ್ಯ ಅರಕ್ಷಕ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **13.06.2015** ರಂದು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಿಂದ ಬಂದ ಮಾಹಿತಿ ಮೇರೆಗೆ, ಆಸ್ಪತ್ರೆಗೆ ಭೇಟಿ ಕೊಟ್ಟು, ಗಾಯಾಳು ಅನಿಲ್ ಹೇಳಿಕೆಯನ್ನು ನಿಪಿ.**1** ರಂತೆ ಪಡೆದುಕೊಂಡಿರುತ್ತೇನೆ, ನಂತರ ಆರೋಪಿಗಳ ಪತ್ತೆಗೆ ಹೋಗಿದ್ದು, ಕಡ್ಡೆಮಕ್ಕಿ ಮಸೀದ ಹತ್ತಿರ ತೌಫಿಕ್, ಆಸಿಫ್, ಶರೀಫ್ ರವರನ್ನು ದಸ್ತಗಿರಿ ಮಾಡಿ, ಠಾಣೆಗೆ ಕರೆತಂದು, ಸಿಪಿಐರವರ ಮುಂದೆ ಹಾಜರುಪಡಿಸಿರುತ್ತೇನೆ, ಅವರುಗಳು ನ್ಯಾಯಾಲಯದ ಮುಂದಿರುವ ಆರೋಪಿತರೇ ಆಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ22 ಫ್ರಾಸಾ.19 ಶ್ರೀ ಕಳಸಪ್ಪ ಎ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **13.06.2015** ರಂದು ರಾತ್ರಿ **9** ಗಂಟೆಗೆ ಹೆಚ್ ಸಿ ನಂ.**54** ರವರು ಗಾಯಾಳುವಿನ ಹೇಳಿಕೆಯನ್ನು ನಿಪಿ.**1** ರಂತೆ ಮಾಡಿಕೊಂಡು ಬಂದು ಹಾಜರುಪಡಿಸಿದ ಮೇರೆಗೆ ಅದನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.**14** ರಂತೆ ನ್ಯಾಯಾಲಯಕ್ಕೆ ಕಳುಹಿಸಿ ಮುಂದಿನ ತನಿಖೆಯನ್ನು ವೃತ್ತ ನಿರೀಕ್ಷಕರಿಗೆ ವರ್ಗಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 23 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಇರುವುದಿಲ್ಲ

ಪ್ರಶ್ನೆಃ 24 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಃ

ಉತ್ತರಃ ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ

ಆರೋಪಿತರಿಗೆ ಅವರು ತಿಳಿದ ಭಾಷೆಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ ಅದರಂತೆ ಆರೋಪಿತರ ಹೇಳಿಕೆಯನ್ನು ದಾಖಲು ಮಾಡಲಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 17 ನೇ ಜುಲೈ ಮಾಹೆ 2019.

ಸಹಿ/-
2 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಆರೋಪಿತನ ಸಹಿ.